# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>**Part – IVA** | ಬೆಂಗಳೂರು, ಸೋಮವಾರ, ೨೯, ಜೂನ್, ೨೦೨೬ (ಆಷಾಢ, ೦೮, ಶಕವರ್ಷ, ೧೯೪೮)<br>**BENGALURU, MONDAY, 29, JUNE, 2026 ( ASHADHA, 08, SHAKAVARSHA, 1948)** | ನಂ. ೪೬೬<br>**No. 466** |
|---|---|---|

## <u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಇಪಿ 50 ಡಿಪಿಐ 2026

ಕರ್ನಾಟಕ ಸರ್ಕಾರದ ಸಚಿವಾಲಯ,<br>ಬಹುಮಹಡಿಗಳ ಕಟ್ಟಡ,<br>ಡಾ|| ಬಿ.ಆರ್. ಅಂಬೇಡ್ಕರ್ ವೀದಿ,<br>ಬೆಂಗಳೂರು, ದಿನಾಂಕ: 29.06.2026.

## <u>ಅಧಿಸೂಚನೆ</u>

ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967ನ್ನು ಈ ಮುಂದಿನಂತೆ ತಿದ್ದುಪಡಿ ಮಾಡಲು ಕರ್ನಾಟಕ ನಾಗರೀಕ ಸೇವೆಗಳು ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ 14) ರ ಕಲಂ 3 ಉಪ ಕಲಂ (1) ರೊಂದಿಗೆ ಓದಿಕೊಂಡ ಕಲಂ 8 ರಂತೆ ಪ್ರದತ್ತವಾದ ಅಧಿಕಾರದನ್ವಯ ಕರ್ನಾಟಕ ಸರ್ಕಾರವು ಉದ್ದೇಶಿಸಿದ್ದು, ಅದರಿಂದ ಬಾಧಿತರಾಗಲು ಸಂಭವವಿರುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಸದರಿ ಅಧಿನಿಯಮದ ಕಲಂ-3 ರ ಉಪ ಕಲಂ (2) ರ ಖಂಡ (ಎ) ರಲ್ಲಿ ಅಗತ್ಯಪಡಿಸಿರುವಂತೆ ಈ ಮೂಲಕ ಪ್ರಕಟಿಸಿದೆ ಹಾಗೂ ಸದರಿ ಕರಡು ತಿದ್ದುಪಡಿ ನಿಯಮಗಳನ್ನು, ಅವುಗಳು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ 7 ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸದರಿ ಕರಡು ತಿದ್ದುಪಡಿ ನಿಯಮಗಳ ಕುರಿತಂತೆ ಯಾವುದೇ ವ್ಯಕ್ತಿಯಿಂದ ನಿಗಧಿತ ಅವಧಿಯೊಳಗೆ ಸ್ವೀಕೃತವಾಗುವ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು -560 001 ಇವರ ವಿಳಾಸಕ್ಕೆ ಕಳುಹಿಸತಕ್ಕದ್ದು.

## <u>ಕರಡು ನಿಯಮಗಳು</u>

1. **ಶೀರ್ಷಿಕೆ ಮತ್ತು ಪ್ರಾರಂಭ:** (1) ಈ ನಿಯಮಗಳನ್ನು ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಯಾಗತಕ್ಕದ್ದು.

2. **ಕೋಷ್ಟಕದ ತಿದ್ದುಪಡಿ:** ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967ರ ಕೋಷ್ಟಕದ ಕ್ರಮ ಸಂಖ್ಯೆ: 66-A ರಲ್ಲಿ "ಪದವೀಧರ ಪ್ರಾಥಮಿಕ ಶಿಕ್ಷಕರ (6 ರಿಂದ 8 ನೇ ತರಗತಿ)" ನಂತರದಲ್ಲಿ ಈ ಕೆಳಗಿನಂತೆ ಸೇರ್ಪಡೆಗೊಳಿಸತಕ್ಕದ್ದು ,-

| | | | | | |
|---|---|---|---|---|---|
| 66 - ಬಿ | ಗಣಕ ವಿಜ್ಞಾನ ಶಿಕ್ಷಕರು<br><br>(1 ರಿಂದ 8ನೇ ತರಗತಿ) | 44425-83700 | 2500 | **ನೇರ ನೇಮಕಾತಿಯಿಂದ :-**<br>ಸರ್ಕಾರದಿಂದ ಕಾಲಕಾಲಕ್ಕೆ ರಚಿಸುವ ನಿಯಮಗಳಾನುಸಾರ | ಬ್ಯಾಚುಲರ್ ಆಫ್ ಸೈನ್ಸ್(ಗಣಕ ವಿಜ್ಞಾನ) (B.Sc in computer science) ಅಥವಾ ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ (BCA) ಅಥವಾ ಬ್ಯಾಚುಲರ್ ಆಫ್ ಇನ್ಫ್ರೋಷನ್ ಟೆಕ್ನಾಲಜಿ (BIT) ಅಥವಾ ಬ್ಯಾಚುಲರ್ ಆಫ್ ಇಂಜಿನಿಯರಿಂಗ್ (ಗಣಕ ವಿಜ್ಞಾನ) [B.E.(CS)] ಅಥವಾ ಬ್ಯಾಚುಲರ್ ಆಫ್ ಟೆಕ್ನಾಲಾಜಿ(ಗಣಕ ವಿಜ್ಞಾನ) [B.Tech.(CS)] ಪದವಿ ಹೊಂದಿರತಕ್ಕದ್ದು<br><br>ಮತ್ತು<br><br>ಪ್ರಥಮ ಅಥವಾ ದ್ವಿತಿಯ ಭಾಷೆಯನ್ನಾಗಿ ಎಸ್.ಎಸ್.ಎಲ್.ಸಿ.ಯಲ್ಲಿ ಮತ್ತು ಪಿ.ಯು.ಸಿ.ಯಲ್ಲಿ ಭಾಷೆಯನ್ನಾಗಿ ಕನ್ನಡವನ್ನು ಓದಿರತಕ್ಕದ್ದು<br><br>ಮತ್ತು<br><br>ಶಾಲಾ ಶಿಕ್ಷಣ ಇಲಾಖೆಯಲ್ಲಿ ಗಣಕ ವಿಜ್ಞಾನ ಶಿಕ್ಷಕರಾಗಿ ನೇಮಕಗೊಂಡ 5 ವರ್ಷಗಳೊಳಗಾಗಿ ಎನ್.ಸಿ.ಟಿ.ಇ.ಯಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಬಿ.ಇಡಿ ಪದವಿಯನ್ನು ಹೊಂದತಕ್ಕದ್ದು ಹಾಗೂ ಶಾಲಾ ಶಿಕ್ಷಣ ಇಲಾಖೆಯಲ್ಲಿ ಗಣಕ ವಿಜ್ಞಾನ ಶಿಕ್ಷಕರಾಗಿ ನೇಮಕಗೊಂಡ 5 ವರ್ಷಗಳೊಳಗಾಗಿ ಟಿ.ಇ.ಟಿ ಪರೀಕ್ಷೆಯಲ್ಲಿ ಅರ್ಹರಾಗತಕ್ಕದ್ದು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಮಲ್ಲಿಕಾರ್ಜುನ ರಾಮಚಂದ್ರಪ್ಪ),**
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ),
ಶಾಲಾ ಶಿಕ್ಷಣ ಮತ್ತು ಸಾಕ್ಷಾರತಾ ಇಲಾಖೆ.

# GOVERNMENT OF KARNATAKA

No.EP 50 DPI 2026

Karnataka Government Secretariat
M.S.Building,
Dr|| B.R. Ambedkar Veedhi,
Bengaluru, Dated:29/06/2026.

## NOTIFICATION

The draft of the following rules further to amend the Karnataka Education Department Services (Department of Public Instruction) (Recruitment) Rules, 1967, which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) is hereby published as required by clause (a) of sub-section (2) of section 3 of the said Act, for the information of all the persons likely to be affected thereby and notice is hereby given that the said draft will be taken into consideration after the expiry of Seven days from the date of its publication in the official Gazette.

Any objection or suggestion which may be received by the State Government from any person with respect to the said draft before the expiry of the period specified above will be considered by the State Government. The Objections or suggestions may be addressed to the Additional Chief Secretary to Government, Department of School Education and Literacy, 6th Floor, M.S. Building, Dr. B.R. Ambedkar Veedhi, Bengaluru - 560 001.

## DRAFT RULES

1. **Title and commencement.-** (1) These rules may be called the Karnataka Education Department Services (Department of Public Instruction) (Recruitment) (Amendment) Rules, 2026.

(2) They shall come into force from date of their final publication in the Official Gazette.

**2. Amendment of Schedule.**- In the Karnataka Education Department Services (Department of Public Instruction) (Recruitment) Rules, 1967, in the schedule after the category of post of "Graduate Primary Teacher for classes 6 to 8", in serial no.66-A and entries relating thereunder the following shall be inserted, namely:-

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | | | | |
|---|---|---|---|---|---|
| 66 - B | Computer Science Teacher<br><br>(1st to 8th std) | 44425-83700 | 2500 | **By Direct Recruitment**:- in accordance with the rules framed by the government from time to time | Must be holder of a Bachelor of Science(Computer Science) or Bachelor of Computer Application or Bachelor of Information Technology or Bachelor of Engineering or Bachelor of Technology in Computer Science<br><br>AND<br><br>Must have studied Kannada as 1st or 2nd language in SSLC and as a language in PUC<br><br>AND<br><br>Must also obtain Bachelor of Education (B.Ed) from an institution recognized by NCTE within 5 years of appointment as Computer Science Teacher in School Education Department and must also clear Teacher Eligibility Test within 5 years of appointment as Computer Science Teacher in School Education Department |

By Order and in the name of the
Governor of Karnataka,

**(Mallikarjuna Ramachandrappa)**
Under Secretary to Government (Admin)
Department of School Education & Literacy

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH